62(7) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) : ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಸಮುದ್ರ ತಡೆಗೋಡೆ ನಿರ್ಮಿಸುವ ಕಾಮಗಾರಿಗೆ ಪ್ರಸ್ತುತ ಸಾಲಿನಲ್ಲಿ ಬಿಡುಗಡೆಯಾದ ಅನುದಾನ ಎಷ್ಟು;

ಆ) ಕಳೆದ ಸಾಲಿನಲ್ಲಿ ಕಡಲ ಕೊರೆತದಿಂದ ಆದ ಒಟ್ಟು ಹಾನಿ ಎಷ್ಟು?

ಇ) ಸಮುದ್ರ ತಡೆಗೋಡೆ ನಿರ್ಮಿಸುವ ವಿಚಾರದಲ್ಲಿ ಆಗಿರುವ ಪ್ರಗತಿ ಏನು?

ಈ) ಪ್ರಸ್ತುತ ಸಾಲಿನಲ್ಲಿ ಇಂತಹ ಎಷ್ಟು ಸಮುದ್ರ ತಡೆಗೋಡೆ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ? (ವಿವರಗಳನ್ನು ನೀಡುವುದು).

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಪ್ರಸ್ತುತ ಸಾಲಿನಲ್ಲಿ (2004–05) ಸಮುದ್ರ ಕೊರೆತ ಕಾಮಗಾರಿಗೆ ಬಿಡುಗಡೆಯಾದ ಅನುದಾನ ರೂ. 61.67 ಲಕ್ಷ

ಆ) 2003–04 ನೇ ಸಾಲಿನ ಮಳೆಗಾಲದಲ್ಲಿ ರಾಜ್ಯದ ಕರಾವಳಿಯ ಸುಮಾರು 11,500 ಮೀಟರ್ ಉದ್ದದ ವಿವಿಧ ಪ್ರದೇಶಗಳಿಗೆ ಸಮುದ್ರ ಕೊರೆತದಿಂದ ಹಾನಿ ಉಂಟಾಗಿರುತ್ತದೆ.

ಇ) ಈ ವರೆಗೆ ಸುಮಾರು 55.77 ಕಿ.ಮೀ. ಉದ್ದಕ್ಕೆ ಕರಾವಳಿಯ ವಿವಿಧ ಪ್ರದೇಶಗಳಲ್ಲಿ ಶಾಶ್ವತ ತಡೆಗೋಡೆಯನ್ನು ಸುಮಾತು ರೂ. 60.00 ಕೋಟಿ ಅಂದಾಜು ವೆಚ್ಚದಲ್ಲಿ ನಿರ್ಮಿಸಲಾಗಿದೆ.

ಈ) ಕುಂದಾಪುರ ಪಡುವರಿಯಲ್ಲಿ ಕೇಂದ್ರ ಪುರಸ್ಕೃತ ಯೋಜನೆಯಡಿ ರೂ. 3.21 ಕೋಟಿ ಅಂದಾಜು ವೆಚ್ಚದಲ್ಲಿ ಶಾಶ್ವತ ತಡೆಗೋಡೆ ನಿರ್ಮಿಸುವ ಪ್ರಸ್ತಾವನೆಗೆ ಕೇಂದ್ರ ಸರ್ಕಾರವು ಮಂಜೂರಿ ನೀಡಿದ್ದು ರಾಜ್ಯ ಸರ್ಕಾರದ ಮಂಜೂರಾತಿ ಪಡೆದು ಶೀಘ್ರವೇ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು. ನ್ಯಾಷನಲ್ ಕೋಸ್ಟಲ್ ಪ್ರೊಟೆಕ್ಷನ್ ಯೋಜನೆ (N.S.P.P.) ಅಡಿಯಲ್ಲಿ ರಾಜ್ಯದ 48.875 ಕಿ.ಮೀ. ಉದ್ದಕ್ಕೆ ತಡೆಗೋಡೆ ನಿರ್ಮಿಸಲು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಕೇಂದ್ರದಿಂದ ಮಂಜೂರಾತಿ ದೊರೆತ ಕೂಡಲೇ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು.

63(103) ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ನಗರದ ರೆವೆನ್ಯೂ ವ್ಯಾಪ್ತಿಯಲ್ಲಿರುವ ಪ್ರದೇಶದಲ್ಲಿರುವ ಮನೆಯ ಮಾಲೀಕರಿಂದ ಕಂದಾಯವನ್ನು ವಸೂಲು ಮಾಡಲು ಸರ್ಕಾರ ಅಧಿಸೂಚನೆ ಹೊರಡಿಸಿದೆಯೇ:

ಆ) ಹಾಗಿದ್ದಲ್ಲಿ ಅಧಿಸೂಚನೆಯ ವಿವರಗಳನ್ನು ನೀಡುವುದು.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) :

ಅ) ನಗರದ ವ್ಯಾಪ್ತಿಯಲ್ಲಿರುವ ಆಸ್ತಿಗಳಿಗೆ, ಸ್ಥಳೀಯ ಸರ್ಕಾರಗಳು ಆಸ್ತಿ ತೆರಿಗೆಯನ್ನು ನಿಗದಿಪಡಿಸಿ ವಸೂಲು ಮಾಡುತ್ತವೆ. ಕಂದಾಯ ಇಲಾಖೆಯವರು ನಗರ ವ್ಯಾಪ್ತಿಯಲ್ಲಿನ ರೆವೆನ್ಯೂ ನಿವೇಶನಗಳಲ್ಲಿ ಮನೆಕಟ್ಟಿಕೊಂಡಿರುವ ಮನೆಯ ಮಾಲೀಕರಿಂದ ಭೂ ಕಂದಾಯವನ್ನು ವಸೂಲು ಮಾಡುವುದಿಲ್ಲ. ಕಂದಾಯ ಇಲಾಖೆಯಿಂದ ಈ ಬಗ್ಗೆ ಯಾವುದೇ ಅಧಿಸೂಚನೆಯನ್ನು ಹೊರಡಿಸಿರುವುದಿಲ್ಲ. ನಗರಾಭಿವೃದ್ಧಿ ಇಲಾಖೆಯವರು ಇದರ ಬಗ್ಗೆ ಕಾನೂನಿನ್ವಯ ಆಸ್ತಿ ತೆರಿಗೆಯನ್ನು ನಿಗದಿಪಡಿಸಿ ವಸೂಲಾತಿ ಮಾಡುತ್ತಾರೆ.